ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 557/2023

ಸಿ ಡಬ್ಲ್ಯೂ-21

ಪಿ ಡಬ್ಲ್ಯೂ- 9

ದಿಃ 07-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಜಾಕ್ಸನ್ ಆರ್. ಡಿಸೋಜಾ |
| ತಂದೆಯ ಹೆಸರುಃ | ರಾಬೋಯಿಟ್ |
| ವಯಸ್ಸುಃ | 44 ವರ್ಷ |
| ಉದ್ಯೋಗಃ | ಪೋಲೀಸ್ ಇನ್ಸಪೆಕ್ಟರ್ |
| ವಿಳಾಸಃ | ಹುಬ್ಬಳ್ಳಿ |

ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದಃ

ನಾನು ದಿಃ01-02-2023 ರಿಂದ ದಿಃ10-06-2023 ರವರೆಗೆ ಅಂಕೋಲಾ ಪೋಲೀಸ್ ಠಾಣೆಯಲ್ಲಿ ಪಿ.ಐ. ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 13-04-2023 ರಂದು ಈ ಪ್ರಕರಣದ ಕಡತವನ್ನು ಚಾಸಾ-20 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆ. ನಂತರ ಅದೇ ದಿನ ಬೆಳಿಗ್ಗೆ ಅಂಕೋಲಾದ ಸರಕಾರಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ, ಅಲ್ಲಿ ಚಾಸಾ-6 ಮತ್ತು 7 ರವರ ಸಮಕ್ಷಮ ಶವಪಂಚನಾಮೆಯನ್ನು ಜರುಗಿಸಿರುತ್ತೇನೆ. ಸಾಕ್ಷಿಯು ಶವಪಂಚನಾಮೆಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಶವಪಂಚನಾಮೆಯನ್ನು ನಿಪಿ-

16 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–16ಎ ಎಂದು ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ಪೋಟೋಗಳನ್ನು ತೆಗೆದಿರುತ್ತೇನೆ. ಸಾಕ್ಷಿಯು ನಿಪಿ–2 ಪೋಟೋವನ್ನು ಗುರುತಿಸುತ್ತಾರೆ. ನಂತರ ಚಾಸಾ–18 ರವರಿಗೆ ಶವಪರೀಕ್ಷೆಯನ್ನು ಮಾಡಲು ಚಾಸಾ–17 ರವರಿಂದ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ನಿವೇದನೆಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ನಿವೇದನೆಯನ್ನು ನಿಪಿ–17 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–17ಎ ಎಂದು ಗುರುತಿಸಲಾಯಿತು. ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಚಾಸಾ–1 ರವರು ತೋರಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ಚಾಸಾ–2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಬೆಳಿಗ್ಗೆ 11 ರಿಂದ 12.15 ಗಂಟೆಯತನಕ ಜರುಗಿಸಿರುತ್ತೇನೆ. ಹಾಗೂ ಕಚ್ಚಾ ನಕಾಶೆಯನ್ನು ತೆಗೆದಿರುತ್ತೇನೆ. ಪಂಚನಾಮೆಯ ಸಮಯದಲ್ಲಿ ಪೋಟೋವನ್ನು ತೆಗೆದಿರುತ್ತೇನೆ. ಸಾಕ್ಷಿಯು ನಿಪಿ–3 ಮತ್ತು 4 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ–3ಸಿ ಮತ್ತು ನಿಪಿ–ಬಿ ಎಂದು ಗುರುತಿಸಲಾಯಿತು. ನಿಪಿ–5 ರಿಂದ 8 ಪೋಟೋಗಳನ್ನು ಸಾಕ್ಷಿಯು ಗುರುತಿಸುತ್ತಾರೆ. ಅದೇ ದಿನ ಚಾಸಾ–8 ರಿಂದ 13 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ15–04–2023 ರಂದು 1ನೇ ಆರೋಪಿಯು ತಾನಾಗಿಯೇ ಬೆಳಿಗ್ಗೆ 10.30 ಗಂಟೆಗೆ ಠಾಣೆಗೆ ಹಾಜರಾಗಿದ್ದು, ದಸ್ತಗಿರಿ ಮಾಡಿ, ದಸ್ತಗಿರಿ ನಿಯಮವನ್ನು ಪಾಲಿಸಿರುತ್ತೇನೆ. ಹಾಗೂ ಆರೋಪಿಯು ತನ್ನ ಜೊತೆಗೆ ಅಪಘಾತಪಡಿಸಿದ ಆಟೊ ರಿಕ್ಷಾವನ್ನು ತೆಗೆದುಕೊಂಡು ಬಂದಿದ್ದು, ಅದನ್ನು ಚಾಸಾ–4 ಮತ್ತು 5 ರವರ ಸಮಕ್ಷವ ಬೆಳಿಗ್ಗೆ 10.45 ರಿಂದ 11.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ, ಪೋಟೋ ತೆಗೆದಿರುತ್ತೇನೆ. ಸಾಕ್ಷಿಯು ನಿಪಿ–9 ರ

ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-9ಬಿ ಎಂದು ನುಡಿಯುತ್ತಾರೆ. ಸಾಕ್ಷಿಯು ನಿಪಿ-10 ಮತ್ತು 11 ಫೋಟೋಗಳನ್ನು ಗುರುತಿಸುತ್ತಾರೆ. ನಂತರ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಗೊಳಿಸಿರುತ್ತೇನೆ. ನಂತರ ಚಾಸಾ-1 ರವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಹಾಗೂ ಚಾಸಾ-14,16 ಮತ್ತು 17 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-15 ರವರು 65ಬಿ ಪ್ರಮಾಣ ಪತ್ರವನ್ನು ನೀಡಿದ್ದು, ಅವುಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು 65 ಬಿ ಪ್ರಮಾಣ ಪತ್ರದ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರಮಾಣ ಪತ್ರವನ್ನು ನಿಪಿ-18 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-18ಎ ಎಂದು ಗುರುತಿಸಲಾಯಿತು. ನಂತರ ದಿಃ15-04-2023 ರಂದು ಆರ್ ಟಿ ಓ ಇವರಿಗೆ ವಾಹನ ಪರೀಕ್ಷೆಯ ನಿವೇದನೆಯನ್ನು ನೀಡಿರುತ್ತೇನೆ. ದಿಃ18-04-2023 ರಂದು ಪಿ ಎಂ ವರದಿಯನ್ನು ಸರಕಾರಿ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಅದರ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಪಿ ಎಂ ವರದಿಯನ್ನು ನಿಪಿ-19 ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-19ಎ ಎಂದು ಗುರುತಿಸಲಾಯಿತು. ದಿಃ 28-04-2023 ರಂದು ಜೆ ಎಂ ಎಫ್ ಸಿ ನ್ಯಾಯಾಲಯಕ್ಕೆ ಅಂಕೋಲಾಕ್ಕೆ ಪ್ರಥಮ ವರ್ತಮಾನ ವರದಿಯಲ್ಲಿ ಕಣ್ತಪ್ಪಿನಿಂದ ಫಿರ್ಯಾದಿಯ ಹೆಸರು ತಪ್ಪಾಗಿ ನಮೂದಾಗಿದ್ದರಿಂದ ಸರಿಪಡಿಸಿಕೊಳ್ಳಲು ನಿವೇದಿಸಿಕೊಂಡಿರುತ್ತೇನೆ. ನಿವೇದನೆಯನ್ನು ನಿಪಿ-20 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-20ಎ ಎಂದು ಗುರುತಿಸಲಾಯಿತು.

3. ದಿಃ02-06-2023 ರಂದು 133 ಎಂ ವಿ ಆಕ್ಟ ಅಡಿಯಲ್ಲಿ ನೋಟೀಸು ನೀಡಿದ್ದು, ವಾಹನದ ಮಾಲೀಕನಾದ 2ನೇ ಆರೋಪಿಯು ಉತ್ತರವನ್ನು ನೀಡಿದ್ದು, ನೋಟೀಸು ಮತ್ತು ಉತ್ತರವನ್ನು ನಿಪಿ-21 ಮತ್ತು 22 ಸಾಕ್ಷಿಯು ಸಹಿಗಳನ್ನು ನಿಪಿ-21ಎ ಮತ್ತು 22ಎ ಎಂದು ಗುರುತಿಸಲಾಯಿತು. ನಂತರ ಇಂಡೆಮ್ನಿಟಿ ಬಾಂಡ್ ಮೇಲೆ ಬಿಡುಗಡೆಗೊಳಿಸಿರುತ್ತೇನೆ. ಆ ಸಮಯದಲ್ಲಿ ವಾಹನದ ದಾಖಲಾತಿಗಳನ್ನು ನೀಡಿರುತ್ತಾರೆ. ಇಂಡೆಮ್ನಿಟಿ ಬಾಂಡನ್ನು ನಿಪಿ-23 ಅದರ ಮೇಲಿರುವ ಸಹಿಯನ್ನು ನಿಪಿ-23ಎ ಎಂದು ಗುರುತಿಸಲಾಯಿತು. ನಂತರ ನನಗೆ ವರ್ಗಾವಣೆಯಾಗಿದ್ದರಿಂದ ಚಾಸಾ-22 ರವರಿಗೆ ಸದರಿ ಕಡತವನ್ನು ನೀಡಿರುತ್ತೇನೆ. ಆರೋಪಿತರನ್ನು ಗುರುತಿಸುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

4. ನೀವು ಘಟನಾ ಸ್ಥಳಕ್ಕೆ ಹೋದೇನು ಎಂದ ಜಾಗದಲ್ಲಿ ವೇಗ ನಿಯಂತ್ರಕ ಗಮನಿಸಿರುತ್ತೀರಾ ಎಂದರೆ ಸಾಕ್ಷಿಯು ಅಲ್ಲಿ ಯಾವುದೇ ವೇಗ ನಿಯಂತ್ರಕ ಇರುವುದಿಲ್ಲ ಎಂದು ನುಡಿಯುತ್ತಾರೆ. ಅಪಘಾತವಾಯಿತು ಎಂಬ ಸ್ಥಳದಿಂದ ಎಷ್ಟು ದೂರದವರೆಗೆ ವೇಗ ನಿಯಂತ್ರಕ ಇರುವುದಿಲ್ಲ ಎಂದರೆ ಸಾಕ್ಷಿಯು ಅಕ್ಕಪಕ್ಕದಲ್ಲಿ ಎಲ್ಲಿಯೂ ಸಹ ಇರುವುದಿಲ್ಲ ಎಂದು ನುಡಿಯುತ್ತಾರೆ. ಅಪಘಾತವಾಯಿತು ಎನ್ನುವ ಸಂದರ್ಭದಲ್ಲಿ ಮೃತಳು ಯಾವ ಬದಿಗೆ ಇದ್ದರು ಎಂದರೆ ಸಾಕ್ಷಿಯು ರಸ್ತೆಯ ಎಡಬದಿಯಲ್ಲಿ ನಡೆದುಕೊಂಡು ಬರುತ್ತಿದ್ದರು ಎಂದು ನುಡಿಯುತ್ತಾರೆ. ಡಾಂಬರು ರಸ್ತೆಯ ಅಂಚಿನಿಂದ 2 ಅಡಿ ದೂರದಲ್ಲಿ ಮೃತರು ನಡೆದುಕೊಂಡು ಹೋಗುತ್ತಿದ್ದರು. ಮೃತಳ ಗಂಡ ಅವಳ ಯಾವ ದಿಕ್ಕಿಗೆ ಇದ್ದ ಎಂದರೆ ಸಾಕ್ಷಿಯು ಮೃತಳ ಸ್ವಲ್ಪ ಮುಂದೆ ಇದ್ದನು ಎಂದು ಹೇಳಿಕೆ

ಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ಸ್ವಲ್ಪ ಎಂದರೆ ಎಷ್ಟು ದೂರ ಎಂದು ಹೇಳಲು ಬರುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಮೃತಳ ದೇಹದ ಯಾವ ಭಾಗಕ್ಕೆ ಆಟೋ ತಾಗಿರುತ್ತದೆ ಎಂದು ನಿಮ್ಮ ತನಿಖೆಯಲ್ಲಿ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಮೃತಳ ಹಿಂದಿನ ಭಾಗಕ್ಕೆ ತಾಗಿದ್ದರಿಂದ ಅವರು ಪುಟಿದು ರಸ್ತೆಯಲ್ಲಿ ಬಿದ್ದಿದ್ದರಿಂದ ಆಕೆಯ ದೇಹದ ಯಾವ ಭಾಗಕ್ಕೆ ತಾಗಿರುತ್ತದೆ ಎಂದು ಗೊತ್ತಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಆಟೋದ ಯಾವ ಭಾಗ ಮೃತಳಿಗೆ ತಾಗಿರುತ್ತದೆ ಎಂದು ನಿಮ್ಮ ತನಿಖೆಯಲ್ಲಿ ಕಂಡುಬಂದಿರುತ್ತದೆ ಎಂದರೆ ಸಾಕ್ಷಿಯು ಆಟೋದ ಮುಂಭಾಗ ತಾಗಿರುತ್ತದೆ ಎಂದು ನುಡಿಯುತ್ತಾರೆ. ಮುಂಭಾಗ ಎನ್ನುವುದು ಮೇಲಿನಿಂದ ಹಿಡಿದುಕೊಂಡು ಟೈಯರ್ ವರೆಗೂ ಬರುತ್ತದೆ ಎಂದರೆ ಸರಿ. ನಿಖರವಾದ ಭಾಗ ಹೇಳಲು ಬರುತ್ತಾ ಎಂದರೆ ಸಾಕ್ಷಿಯು ಹೆಡ್ ಲೈಟ್ ಹತ್ತಿರ ಎಂದು ನುಡಿಯುತ್ತಾರೆ. ಎಷ್ಟು ಹೆಡ್ ಲೈಟುಗಳು ಇದ್ದವು ಎಂದು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ಪೋಟೋಗಳನ್ನು ನೋಡಿಕೊಂಡು ಎಡಬದಿ ಮತ್ತು ಬಲಬದಿ ಇರುತ್ತದೆ ಎಂದು ನುಡಿಯುತ್ತಾರೆ. ಬಲಬದಿಯ ಹೆಡ್ ಲೈಟು ಕಳಚಿರುತ್ತದೆ, ಪೋಟೋಗದಲ್ಲಿ ಎಲ್ಲಿಯೂ ಸಹ ಹೆಡ್ ಲೈಟು ಕಳಚಿದ ಬಗ್ಗೆ ಕಂಡುಬಂದಿರುವುದಿಲ್ಲ ಎಂದರೆ ಸಾಕ್ಷಿಯು ಪೋಟೊವನ್ನು ದೂರದಿಂದ ತೆಗೆದಿದ್ದರಿಂದ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಪೋಟೋವನ್ನು ಸಮೀಪದಿಂದ ತೆಗೆಯಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಈ ರೀತಿ ವಾಹನಕ್ಕೆ ಹಾಗೂ ಹೆಡ್ ಲೈಟಿಗೆ ಯಾವುದೇ ಹಾನಿಯಾಗಿರುವುದಿಲ್ಲ, ಆದ ಕಾರಣ ನೀವು ಹತ್ತಿರದಿಂದ ಪೋಟೋವನ್ನು ಉದ್ದೇಶಪೂರ್ವಕವಾಗಿ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ.

5. ಮಹಿಳೆಯು ವಾಹನ ತಾಗಿತ್ತು ಎಂಬುದರಿಂದ ಎಷ್ಟು ದೂರದಲ್ಲಿ ಹಾರಿ ಬಿದ್ದಿರುತ್ತಾಳೆ ಎಂದರೆ ಸಾಕ್ಷಿಯು ಸುಮಾರು 9 ಅಡಿ ಅಂತರದಲ್ಲಿ ಬಿದ್ದಿರುತ್ತಾಳೆ ಎಂದು ನುಡಿಯುತ್ತಾರೆ. ಅದು ಬಲಕ್ಕಾ ಅಥವಾ ಎಡಕ್ಕಾ ಅಥವಾ ಮುಂದೆ ಬಿದ್ದಿರುತ್ತಾಳಾ ಎಂದರೆ ಸಾಕ್ಷಿಯು ಬಲಕ್ಕೆ ಓರೇಯಾಗಿ ಬಿದ್ದಿರುತ್ತಾಳೆ ಎಂದು ನುಡಿಯುತ್ತಾರೆ. ಮಹಿಳೆ ಬಿದ್ದ ಸ್ಥಳವನ್ನು ನೀವು ನಕಾಶೆಯಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ. ಅಲ್ಲಿ ಬ್ರೆಕ್ ಮಾರ್ಕಗಳು ಬಿದ್ದಿದ್ದವಾ ಎಂದರೆ ಸಾಕ್ಷಿಯು ಬಿದ್ದಿರುವುದಿಲ್ಲ ಎಂದು ನುಡಿಯುತ್ತಾರೆ. ಬಿಡಿ ಭಾಗಗಳು ಏನಾದರೂ ಬಿದ್ದಿದ್ದವಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಶಿವಮ್ಮ ಮತ್ತು ಬಾಲಚಂದ್ರ ಎಂಬುವವರ ಮನೆಯನ್ನು ತೋರಿಸಿದ್ದು, ಅವರು ಮೃತರ ಜಾತಿಗೆ ಸೇರಿದವರು ಎಂದರೆ ಸರಿ. ಇವರ ಮನೆಗಳನ್ನು ಬಿಟ್ಟು ಬೇರೆ ಜಾತಿಯವರ ಮನೆಗಳು ಇರುತ್ತವಾ ಎಂದರೆ ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಒಂದೇ ಜಾತಿಯವರ ಮನೆಗಳು ಇದ್ದವು ಎಂದು ನುಡಿಯುತ್ತಾರೆ. ಅಲ್ಲಿ ಚೋಳಾ ನಾಯ್ಕು ಮತ್ತು ಮಂಜು ನಾಯ್ಕು ಎಂಬುವವರ ಮನೆಗಳೂ ಸಹ ಘಟನೆಯಾಯಿತು ಎನ್ನುವ ಸ್ಥಳದ ಸಮೀಪದಲ್ಲೇ ಇದ್ದವು ಎಂದರೆ ಸಾಕ್ಷಿಯು ನನಗೆ ಈಗ ನೆನಪಿರವುದಿಲ್ಲ ಎಂದು ನುಡಿಯುತ್ತಾರೆ. ಅವರ ಮನೆಗಳನ್ನು ತೋರಿಸಿದರೆ ನೀವು ಸುಳ್ಳು ಪ್ರಕರಣವನ್ನು ಮಾಡಿರುತ್ತೀರಿ ಎಂದು ಗೊತ್ತಾಗುತ್ತದೆ ಎಂಬ ಕಾರಣದಿಂದ ಅವರ ಮನೆಗಳನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾಯಿತು ಎನ್ನುವ ಸ್ಥಳದಲ್ಲಿ ಕೆಂಪು ಕಲ್ಲುಗಳು ಇದ್ದವಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ಮನೆಯನ್ನು ಕಟ್ಟಲು ದೂರದಲ್ಲಿ ಇಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಅಲ್ಲಿ ಎಷ್ಟು ವಿದ್ಯುತ್ ಕಂಬಗಳು ಇದ್ದವು ಎಂದರೆ ಸಾಕ್ಷಿಯು ಅಲ್ಲಿ ಕಂಬಗಳು ಇರುತ್ತವೆ, ಆದರೆ ನಾವು

ಗುರುತನ್ನು ಮಾಡಲು ಮಾತ್ರ ಕಂಬವನ್ನು ಪಂಚನಾಮೆಯಲ್ಲಿ ತೆಗೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಕಂಬಗಳು ರಸ್ತೆಯಿಂದ ಎಷ್ಟು ದೂರದಲ್ಲಿ ಇರುತ್ತವೆ ಎಂದು ನೀವು ನಕಾಶೆಯಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ. ಕಚ್ಚಾ ನಕಾಶೆಯು ಸತ್ಯ ಸಂಗತಿಗಳನ್ನು ಮರೆ ಮಾಚಿ, ಸುಳ್ಳು ಸಂಗತಿಗಳನ್ನು ತೋರಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ಎಷ್ಟು ಜನ ಪಂಚನಾಮೆ ಮಾಡಲು ಹೋಗಿರುತ್ತೀರಿ ಎಂದರೆ ಸಾಕ್ಷಿಯು ನಾನು ಮತ್ತು ನಮ್ಮ ಸಿಬ್ಬಂದಿಗಳು ಸೇರಿ ಒಟ್ಟು 4 ಜನರು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಅಲ್ಲಿ ನೀವು ಹೋಗಿದ್ದೇವು ಎನ್ನುವ ಸಂದರ್ಭದಲ್ಲಿ ಅಲ್ಲಿ ಯಾರಾದರೂ ವ್ಯಕ್ತಿಗೆ ನಾಳೆ ನಾವು ವಾಹನ ಪಂಚನಾಮೆಯನ್ನು ಮಾಡುವವರು ಇದ್ದೇವೆ, ಅಲ್ಲಿಗೆ ಬನ್ನಿ ಎಂದು ಕರೆದಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಂಚಾರ ನಿಯಮದ ಪ್ರಕಾರ ಪಾದಾಚಾರಿಗಳು ರಸ್ತೆಯ ಯಾವ ಬದಿಗೆ ನಡೆದಕೊಂಡು ಹೋಗಬೇಕು ಎಂದರೆ ಸಾಕ್ಷಿಯು ಯಾವ ದಿಕ್ಕಿಗೆ ಎಂದು ಹೇಳಲು ಬರುವುದಿಲ್ಲ, ನಾವು ವಾಹನಗಳಿಗೆ ಮಾತ್ರ ಸಂಚಾರ ನಿಯಮಗಳನ್ನು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಪಾದಾಚಾರಿಗಳಿಗೆ ಕಚ್ಚಾ ರಸ್ತೆಯಲ್ಲಿ ಹಾಗೂ ಪುಟ್ ಪಾತ್ ನಲ್ಲಿ ನಡೆದುಕೊಂಡು ಹೋಗಬೇಕಾದರೆ ಯಾವುದೇ ನಿಯಮಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಘಟನಾ ಸ್ಥಳಕ್ಕೆ ಹೋಗಿದ್ದಾಗಲಿ, ಪಂಚನಾಮೆ ಮಾಡಿದ್ದಾಗಲಿ, ಕಚ್ಚಾ ನಕಾಶೆ ಬಿಡಿಸಿದ್ದಾಗಲಿ, ಪೊಟೋವನ್ನು ತೆಗೆದಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ಹೇಳಿಕೆ ಹಾಗೂ ಮರು ಹೇಳಿಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಹೆಡ್ ಲೈಟಿಗೆ ಪ್ಯಾರಲಲ್ ಆಗಿ ಮೃತಳಿಗೆ ಯಾವುದಾದರೂ ಭಾಗಕ್ಕೆ ಗಾಯವಾಗಿತ್ತಾ ಎಂದರೆ ಸಾಕ್ಷಿಯು ನಿಖರವಾಗಿ ಹೇಳಲು

ಬರುವುದಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಒಬ್ಬ ವ್ಯಕ್ತಿಗೆ ಹಿಂದಿನಿಂದ ಹೆಡ್ ಲೈಟ್ ತಾಗಿದರೆ ತೊಡೆಯ ಹಿಂಭಾಗಕ್ಕೆ ಗಾಯವಾಗುತ್ತದೆ ಎಂದರೆ ಸಾಕ್ಷಿಯು ಗಾಯ ಆಗಬಹುದು ಅಥವಾ ಅಗದೇನೂ ಇರಬಹುದು ಎಂದು ನುಡಿಯುತ್ತಾರೆ. ಆರೋಪಿ ಮಾರನೇ ದಿನ ಬಂದಿದ್ದಾಗಲಿ, ನೀವು ದಸ್ತಗಿರಿ ಮಾಡಿದ್ದಾಗಲಿ, ವಾಹನವನ್ನು ಬಿಡಿಸಿಕೊಂಡು ಹೋಗಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಪ್ರಕರಣವನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಕಾಶೆಯನ್ನು ಯಾವ ವಸ್ತುವಿನಿಂದ ಬಿಡಿಸಿರುತ್ತೀರಿ ಎಂದರೆ ಸಾಕ್ಷಿಯು ಪೆನ್ನಿನಿಂದ ಬಿಡಿಸಿರುತ್ತೇವೆ ಎಂದು ನುಡಿಯುತ್ತಾರೆ. ಮೃತಳ ಕುಟುಂಬಕ್ಕೆ ಪರಿಹಾರ ಕೊಡಿಸಬೇಕು ಎನ್ನುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ಸೃಷ್ಟಿಮಾಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳುವ 65 ಬಿ ಪ್ರಮಾಣ ಪತ್ರವು ಕಾನೂನು ಬದ್ಧವಾಗಿ ಇರುವುದಿಲ್ಲ ಎಂದರೆ ಸರಿಯಲ್ಲ. ಕಾನೂನು ಬದ್ದವಾಗಿ ಇಲ್ಲದೇ ಇರುವುದರಿಂದ ನ್ಯಾಯಾಲಯವು ಅದನ್ನು ಪರಿಗಣಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನೀವು ಘಟನಾ ಸ್ಥಳಕ್ಕೆ ಹೋಗಿದ್ದಾಗಲಿ, ಪೊಟೋಗಳನ್ನು ತೆಗೆದಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಬಿದ್ದಳು ಎಂದ ಮಹಿಳೆಯು ಮುಖ ಕೆಳಗೆ ಆಗಿ ಬಿದ್ದಿರುತ್ತಾಳಾ ಅಥವಾ ಮೇಲೆ ಆಗಿ ಬಿದ್ದಿರುತ್ತಾಳಾ ಎಂದರೆ ಸಾಕ್ಷಿಯು ಯಾವ ರೀತಿ ಬಿದ್ದಿರುತ್ತಾಳೆ ಎಂದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆಟೋ ರಿಕ್ಷಾದ ಶೇಪ್ ಎಂದರೆ ಬಹಳ ದೊಡ್ಡ ಭಾಗ ಎಂದರೆ ಸರಿ. ಹಾಗೂ ಆಟೋ ರಿಕ್ಷಾದ ಮುಂಭಾಗವನ್ನು ಶೇಪ್ ಎನ್ನುತ್ತಾರೆ ಎಂದರೆ ಸರಿ. ನೀವು ಈ ಪ್ರಕರಣದಲ್ಲಿ ಸಮಂಜಸವಾಗಿ ಯಾವುದೇ ತನಿಖೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನೀವು ಸಮಂಜಸವಾಗಿ ತನಿಖೆಯನ್ನು ಮಾಡಿದ್ದರೆ ನೀವು ಹೇಳುವ ಆಟೋ ರಿಕ್ಷಾ ಮಹಿಳೆಯ ಸಂಪರ್ಕಕ್ಕೆ ಬಂದಿರುವುದಿಲ್ಲ ಎಂದು  ಗೊತ್ತಾಗುತ್ತಿತ್ತು ಎಂದರೆ ಸರಿಯಲ್ಲ. ಆಟೋ ರಿಕ್ಷಾ ಮಹಿಳೆಗೆ ಡಿಕ್ಕಿ  ಹೊಡೆದಿರುವುದಿಲ್ಲ  ಹಾಗೂ ಆರೋಪಿತರಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಯಾವುದೇ ತಪ್ಪು ಇಲ್ಲ ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

C/c. ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.